ನಾಕಾರು ಜನರೊಂದಿಗೆ ಸೇರಿಕೊಂಡು ಊರ ಹಿರೇತನದೊಂದಿಗೆ ಜನರ ನ್ಯಾಯ ಪಂಚಾಯಿತಿ ಮಾಡಿಕೊಂಡು ತಿರುಗುತ್ತಿದ್ದ. ಮುಂಜಾಲೆದ್ದು ತನ್ನ ನಿತ್ಯಕರ್ಮಗಳನ್ನು ಮುಗಿಸಿಕೊಂಡವನೆ ಬಿಳಿ ಶುಭ್ರ ಅಂಗಿ- ಧೋತರ ತೊಟ್ಟು, ತಲೆಗೆ ಪಟಕ ಸುತ್ತಿಕೊಂಡು ಮನೆ ಬಿಟ್ಟನೆಂದರೆ ತೀರಿತು! ತನ್ನ ಪಾಲಿನ ಆ ಮನೆಯಲ್ಲಿ ಯಾರು ಇದ್ದಾರೋ, ಅಥವಾ ಸತ್ತಾರೋ ಎಂಬುದರ ಖಬರು ಆತನಿಗೆ ಎಳ್ಳಷ್ಟೂ ಇರುತ್ತಿರಲಿಲ್ಲ. ಹುಚ್ಚಪ್ಪ, ತನ್ನ ಟೋಳಿಯನ್ನು ಕಟ್ಟಿಕೊಂಡು ದಿನವೂ ಯಾವುದಾದರೊಂದು ಮನೆಯಲ್ಲಿ ಗಂಡ- ಹೆಂಡಿರ ಜಗಳ ಅಥವಾ ಹೊಲ– ಮನೆಗಳ ನ್ಯಾಯ ಪಂಚಾಯಿತಿ ಮಾಡುತ್ತ ಕುಂತನೆಂದರೆ, ಆ ಮನೆಯಲ್ಲೇ ಬೆಳಗಿನ ನಾಸ್ಟಾ, ಮಧ್ಯಾಹ್ನದ ಊಟ, ಸಂಜೆಯ 'ಚಾ...' ಮುಗಿಸಿಕೊಂಡು ರಾತ್ರಿ ಮುಗುಲಾಗ ಚುಕ್ಕಿ ಮೂಡುವ ಹೊತ್ತಿಗೆಲ್ಲ ಮನೆಗೆ ಬಂದವನೆ ಉಂಡರೆ ಉಂಡ ಇಲ್ಲದಿದ್ರ ಇಲ್ಲ ಎಂಬಂತೆ ಕೋಲ್ಯಾಗ ಹೋಗಿ ಕಲ್ಲವ್ವನ ಪಕ್ಕದಲ್ಲಿ ಕಟ್ಟಿಗೆಯ ತುಂಡು ಬಿದ್ದವರಂಗೆ ಬಿದ್ದುಕೊಂಡು ಗೊರಕೆ ಹೊಡೆಯುತ್ತಿದ್ದ. ಇದರ ಬಗ್ಗೆ ಮೊದಮೊದಲು ಅಷ್ಟೇನೂ ತಲೆ ಕೆಡಿಸಿಕೊಂಡಿರದಿದ್ದ ಕಲ್ಲವ್ವ ಮಾತ್ರ ತನ್ನ ಗಂಡ ಊರ ಹಿರೇತನ ಮಾಡಿ, ಬೇಸತ್ತು ಬಂದು ಮಲಗಿದ್ದಾನೆ ಎಂದುಕೊಳ್ಳುತ್ತಿದ್ದಳು. ಆದರೆ, ಹುಚ್ಚಪ್ಪನ ವಿಚಾರದಾಗ ದಿನವೂ ಇದೇ ಥರ ನಡೆದುಕೊಂಡು ಬರಲಾರಭಿಸುವುದರೊಂದಿಗೆ ರಾತ್ರಿ ಹಾಸುಗೆಯಲ್ಲಿ ತನ್ನ ದೇಹ ಬಯಕೆಯನ್ನು ಒಮ್ಮೆಯೂ ಸಹ ಈಡೇರಿಸಲು ಹುಚ್ಚಪ್ಪನು ಮನಸ್ಸು ಮಾಡದೇ ಇರುವುದು ಕಲ್ಲವ್ವನು ಪ್ರತೀ ರಾತ್ರಿಯು ವಿರಹದುರಿಯಲ್ಲಿ ಬೇಯುವಂತಾಯಿತು! ಇದೆಲ್ಲ ಆಕೆಯನ್ನು ಇನ್ನಿಲ್ಲದ ಸಂಕಟಕ್ಕೀಡು ಮಾಡಿತು. ಆ ಸಂಕಟದಿಂದಾಗಿಯೇ ಆಕೆ ಒಮ್ಮೊಮ್ಮೆ ವಯೋಸಹಜವಾದ ದೇಹ ಬಯಕೆಗಳಿಂದಾಗಿ ಹುಚ್ಚಪ್ಪನ ಮೈಮ್ಯಾಲೆ ಕೈ ಹಾಕಿ ಆತನನ್ನು ಉದ್ರೇಕಿಸಲು ಪ್ರಯತ್ನಿಸಿ ಸೋತು ಹೋಗಿದ್ದಳು. ಆಗಲೇ, ಆತನಿಗೆ ಅದೇ ಇಲ್ಲ...! ಎಂಬುದು ಕಲ್ಲವ್ವನಿಗೆ ಗೊತ್ತಾಗಿ ಹೋಗಿತ್ತು!

ಯಾವಾಗ ಹುಚ್ಚಪ್ಪನಿಗೆ ತನ್ನನ್ನು ತೃಪ್ತಿಪಡಿಸಲು ಆಗುವುದಿಲ್ಲ ಎಂಬುದು ಕಲ್ಲವ್ವನಿಗೆ ಮನವರಿಕೆಯಾಯಿತಲ್ಲ, ಆಗಲೇ ಇದು ಗಂಡಸೇ ಅಲ್ಲ... ಎಂಬ ನಿರ್ಧಾರಕ್ಕೆ ಬಂದು ತನ್ನ ಪಾಡಿಗೆ ತಾನು ಇರಲಾರಂಭಿಸಿದಳು. ಆದರೆ, ಹೆಣ್ಣಾದ ತನಗೆ ದೇಹ ಬಯಕೆಯನ್ನು ಈಡೇರಿಸಿಕೊಳ್ಳಲಾಗಲಿಲ್ಲವಲ್ಲ ಎಂಬ ಚಿಂತೆ ಕಲ್ಲವ್ವನನ್ನು ಸದಾ ಕಾಡುತ್ತಲೇ ಇತ್ತು. ಇದರಿಂದಾಗಿ ಸಂದಿಗ್ಧಕ್ಕೊಳಗಾದ ಆಕೆ ಆ ಚಿಂತೆಯಿಂದ ಪಾರಾಗುವ ದಾರಿಯನ್ನು ಹುಡುಕತೊಡಗಿದಳು. ಆಗ, ಕಲ್ಲವ್ವನ ಕೈ ಹಿಡಿದದ್ದೇ ಗುಂಡು ಕಲ್ಲುಗಳೇ ತುಂಬಿಕೊಂಡಿದ್ದ ಒಡಕಿ ಮ್ಯಾಲಿನ ಎರಡೆಕರೆ ಜಮೀನು! ಆ ಜಮೀನನ್ನು ಬೆಳೆ ತೆಗೆಯಬಲ್ಲ ಭೂಮಿಯನ್ನಾಗಿಸುವ ಕೆಲಸದಲ್ಲಿ ತನ್ನ ನೋವು, ಸಂಕಟ, ಹತಾಶೆ, ಬಯಕೆ, ಬೇನೆಗಳನ್ನು ಮರೆತು ಬದುಕತೊಡಗಿದಳು. ಆದರೂ ಆಕೆ ಮಾನಸಿಕವಾಗಿ ಸಾಕಷ್ಟು ಕುಗ್ಗಿ ಹೋಗಿದ್ದಳು. ಆಗಲೇ, ಆಕೆಯ ಬದುಕಿನಲ್ಲಿ ವಿಧಿಯು ಬಸಪ್ಪನ ಹೆಂಡತಿ ಸಿದ್ಧಮ್ಮನ ರೂಪದಲ್ಲಿ ಬೇರೆಯದೇ ಆಟವಾಡಲು ಶುರು ಮಾಡಿತ್ತು!

ಯಾವ ರೀತಿಯಿಂದ ಅಳೆದು ತೂಗಿ ನೋಡಿದರೂ ಸಿದ್ಧಮ್ಮನ ಬಾಳೇವಿಯೂ ಸಹ ಕಲ್ಲವ್ವನ ಬಾಳೇವಿಗಿಂತ ಏನೂ ಫರಕು ಇರಲಿಲ್ಲ. ಒಂದು ರೀತಿಯಲ್ಲಿ ಅತ್ತ ದೇಹ ಬಯಕೆಯನ್ನು ಈಡೇರಿಸಿಕೊಳ್ಳುವುದರಲ್ಲಿ ಆಸಕ್ತಿಯೇ ಇಲ್ಲದ ಹುಚ್ಚಪ್ಪನಿಂದಾಗಿ ದಿನ ರಾತ್ರಿಯೂ ಕಲ್ಲವ್ವ ವಿರಹದುರಿಯಲ್ಲಿ ಬೇಯುವಂತಾಗಿದ್ದರೆ, ಇತ್ತ ಅತಿಯಾದ ದೇಹ ಬಯಕೆಯನ್ನು ಹೊಂದಿದ್ದ ಬಸಪ್ಪನು ಹೊತ್ತು ಗೊತ್ತಿಲ್ಲದ ಸಮಯದಲ್ಲಿ ಸಿದ್ಧಮ್ಮನನ್ನು ಹಾಸುಗೆಗೆ ಎಳೆದೊಯ್ದು ಮೈಮೇಲೆ ಗೂಳಿಯಂತೆ ಎರಗಿ ಹಿಂಡಿ ಹಿಪ್ಪೆ ಮಾಡುತ್ತಿದ್ದ ಪರಿಗೆ ಹೈರಾಣಾಗಿ ಹೋಗಿದ್ದಳು. ಆತ ಈ ವಿಚಾರದಲ್ಲಿ ಅದೆಷ್ಟು ಲಜ್ಜೆಗೇಡಿಯಾಗಿದ್ದನೆಂದರೆ ಸಿದ್ಧಮ್ಮ ಆಗಷ್ಟೇ ಹೊರಗಾದ ಮತ್ತು ಮುಟ್ಟು ನಿಲ್ಲುವ ದಿನಗಳನ್ನೂ ಸಹ ಲೆಕ್ಕಿಸದೇ ಆಕೆಯನ್ನು ದೈಹಿಕವಾಗಿ ಹಿಂಸಿಸುತ್ತಿದ್ದ! ಬಸಪ್ಪನ ಈ ಥರದ ವರ್ತನೆಯಿಂದಾಗಿ ಸಿದ್ಧಮ್ಮ ಬಹಳಷ್ಟು ಸಲ ಹೊಟ್ಟೀಲೆ ನಿಂತರೂ ಕೂಡ ತಿಂಗಳು ತುಂಬುವುದರೊಳಗೆ 'ಹೊಲಿ' ಉಳುದು ಬಿಡುತ್ತಿದ್ದಳು. ಇದರಿಂದಾಗಿ ಆಕೆ ದೈಹಿಕವಾಗಿ ಸಾಕಷ್ಟು ಸೋತು ಹೋಗಿದ್ದಳು. ಕಡೆಗೂ ಆತ ಕೊಡುತ್ತಿದ್ದ ಕಾಟಣಿಗೆ ಬೇಸತ್ತು, ಒಂದು ಕೂಸು ಹುಟ್ಟುವ ಮೊದಲೇ ಅದೊಂದು ದಿನ ಇಳಿಸಂಜೆ ಹೊತ್ತಲ್ಲಿ ನೀರು